# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಬುಧವಾರ ೨೬, ನವೆಂಬರ್, ೨೦೨೫ ( ಮಾರ್ಗಶಿರಾ , ೦೫, ಶಕವರ್ಷ, ೧೯೪೭)<br>BENGALURU, WEDNESDAY 26, NOVEMBER, 2025 (MARGASHIRA , 05, SHAKAVARSHA, 1947) | ನಂ. ೭೫೫<br>No. 755 |
|---|---|---|


**ಕರ್ನಾಟಕ ಸರ್ಕಾರ**

ಸಂಖ್ಯೆ: ನಅಇ 471 ಬಿಎಂಆರ್ 2025 (ಇ)

ಕರ್ನಾಟಕ ಸರ್ಕಾರದ ಸಚಿವಾಲಯ,
4ನೇ ಮಹಡಿ, ವಿಕಾಸಸೌಧ,
ಡಾ|| ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 24.11.2025

**ಅಧಿಸೂಚನೆ-I**

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ 1961 (1963 ರ ಕರ್ನಾಟಕ ಅಧಿನಿಯಮ ಸಂಖ್ಯೆ:11) ರ ಕಲಂ 4-B ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 159 ಬಿಎಂಆರ್ 2015, ದಿನಾಂಕ 21.12.2015 ಹಾಗೂ ನಅಇ 76 ಬಿಎಂಆರ್ 2024 (ಇ), ದಿನಾಂಕ 03.03.2025 ರಲ್ಲಿ ಘೋಷಿಸಲಾದ ಪರಿಷ್ಕೃತ ಕನಕಪುರ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ ಕೆಳಕಂಡ 08 ಗ್ರಾಮಗಳನ್ನು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಿಂದ ಹೊರತುಪಡಿಸಿ ಆದೇಶಿಸಲಾಗಿದೆ.

**ಕೋಷ್ಟಕ-1**

**ಕನಕಪುರ ಸ್ಥಳೀಯ ಯೋಜನಾ ಪ್ರದೇಶದಿಂದ ಹಿಂಪಡೆಯಲಾದ ಗ್ರಾಮಗಳ ವಿವರಗಳು.**

| ಕ್ರ.ಸಂ | ತಾಲ್ಲೂಕು | ಹೋಬಳಿ | ಗ್ರಾಮಗಳ ಹೆಸರು | ಜನಸಂಖ್ಯೆ (2011 ಜನಗಣತಿಯಂತೆ) | ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ) | ಷರಾ |
|---|---|---|---|---|---|---|
| 1 | **ಕನಕಪುರ** | ಕಸಬಾ | ಅರಳಾಳು | 1790 | 72.90 | ಭಾಗಶಃ ಗ್ರಾಮ |
| 2 | | | ಬೇಕುಪ್ಪೆ | 821 | 49.74 | |
| 3 | | | ಚೌಕಸಂದ್ರ | 1205 | 196.40 | |
| 4 | | | ಹೊರಳಗಲ್ಲು | 2497 | 35.28 | |
| 5 | | | ಕೂನೂರು | 880 | 98.33 | |
| 6 | | | ಶೀಗೇಕೋಟೆ | 1551 | 153.59 | |
| 7 | | | ಶಿವನಹಳ್ಳಿ | 1799 | 260.67 | |
| 8 | | | ತಿಗಳರ ಹೊಸಹಳ್ಳಿ | 1255 | 315.97 | |
| | | | **ಒಟ್ಟು** | **11798** | **1182.88** | |

ಮುಂದುವರೆದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ 1961 (1963 ರ ಕರ್ನಾಟಕ ಅಧಿನಿಯಮ ಸಂಖ್ಯೆ:11) ರ ಕಲಂ 4-A ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಮೇಲಿನ ಕೋಷ್ಟಕ-1 ರಲ್ಲಿ ಕನಕಪುರ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಿಂದ ಹೊರತುಪಡಿಸಲಾದ ಗ್ರಾಮಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 119 ಬಿಎಂಆರ್ 2023(ಇ), ದಿನಾಂಕ: 18.11.2023 ರಲ್ಲಿ ರಚಿಸಲಾದ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಸೇರ್ಪಡೆಗೊಳಿಸಿ ಪರಿಷ್ಕೃತ ಸ್ಥಳೀಯ ಯೋಜನಾ ಪ್ರದೇಶವನ್ನು ಈ ಮೂಲಕ ಘೋಷಿಸಲಾಗಿದೆ. ಗ್ರೇಟರ್ ಬೆಂಗಳೂರು ಪರಿಷ್ಕೃತ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಪಟ್ಟಣ/ ಗ್ರಾಮದ ವಿವರಗಳನ್ನು ಅನುಬಂಧ-1 ರಲ್ಲಿ ಹಾಗೂ ಪರಿಷ್ಕೃತ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯ ವಿವರಗಳನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ರಾಜೇಶ್ ಎಸ್.ಸೂಳಿಕೇರಿ)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.
(ಬಿಡಿಎ & ಬೆಂ-1).

## <u>ಅನುಬಂಧ-1</u>

## ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡುವ ಗ್ರಾಮಗಳ ವಿವರ.

| ಪರಿಷ್ಕೃತ ಗ್ರೇಟರ್ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡುವ ಗ್ರಾಮಗಳ ವಿವರ | | | | | | |
|---|---|---|---|---|---|---|
| **ಕ್ರ.ಸಂ** | **ತಾಲ್ಲೂಕು** | **ಹೋಬಳಿ** | **ಗ್ರಾಮಗಳ ಹೆಸರು** | **ಜನಸಂಖ್ಯೆ (2011 ಜನಗಣತಿಯಂತೆ)** | **ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ)** | **ಷರಾ** |
| 1. | ರಾಮನಗರ | ಬಿಡದಿ | ಬಿಡದಿ | 9917 | 173.74 | ಪೂರ್ಣಗ್ರಾಮ |
| 2. | | | ಕಲ್ಲುಗೋಪನಹಳ್ಳಿ | 1184 | 257.78 | ಪೂರ್ಣಗ್ರಾಮ |
| 3. | | | ಕೆಂಚನಕುಪ್ಪೆ | 3461 | 413.28 | ಪೂರ್ಣಗ್ರಾಮ |
| 4. | | | ಮುದ್ದಾಪುರ ಕರೇನಹಳ್ಳಿ | 969 | 605.23 | ಪೂರ್ಣಗ್ರಾಮ |
| 5. | | | ಅಬ್ಬನಕುಪ್ಪೆ | 2807 | 368.52 | ಪೂರ್ಣಗ್ರಾಮ |
| 6. | | | ಇಟ್ಟಮಡು | 2059 | 504.71 | ಪೂರ್ಣಗ್ರಾಮ |
| 7. | | | ರಾಮನಹಳ್ಳಿ | 1439 | 367.76 | ಪೂರ್ಣಗ್ರಾಮ |
| 8. | | | ಹುಲ್ಲೂರು ರಾಜ್ಯ ಅರಣ್ಯ ವಲಯ | 655 | 1335.82 | ಪೂರ್ಣಗ್ರಾಮ |
| 9. | | | ಐವಾಗಿಲು | 30 | 71.89 | ಪೂರ್ಣಗ್ರಾಮ |
| 10. | ರಾಮನಗರ | ಕಸಬಾ | ಕೆಂಪನಹಳ್ಳಿ | 1009 | 202.46 | ಪೂರ್ಣಗ್ರಾಮ |
| 11. | | | ಬಳಗುಳಿ | 0 | 87.37 | ಪೂರ್ಣಗ್ರಾಮ |
| 12. | | | ಬಸವನಪುರ | 1224 | 233.86 | ಪೂರ್ಣಗ್ರಾಮ |
| 13. | | | ಕೇತೋಹಳ್ಳಿ | 2404 | 587.67 | ಪೂರ್ಣಗ್ರಾಮ |
| 14. | | | ಮಾದಾಪುರ | 1187 | 393.66 | ಪೂರ್ಣಗ್ರಾಮ |
| 15. | | | ಮಾಯಗಾನಹಳ್ಳಿ | 1623 | 475.12 | ಪೂರ್ಣಗ್ರಾಮ |
| 16. | | | ಹಾಗಲಹಳ್ಳಿ | 2784 | 1037.79 | ಪೂರ್ಣಗ್ರಾಮ |
| 17. | | | ಧಾರಾಪುರ | 256 | 151.97 | ಪೂರ್ಣಗ್ರಾಮ |
| 18. | | | ಹಳ್ಳಿಮಾಳ | 1596 | 652.35 | ಪೂರ್ಣಗ್ರಾಮ |

| | | | | | | |
|---|---|---|---|---|---|---|
| 19. | | | ಹರೀಸಂದ್ರ | 3483 | 1580.77 | ಪೂರ್ಣಗ್ರಾಮ |
| 20. | | | ಬೊಮ್ಮಚ್ಚನಹಳ್ಳಿ | 1658 | 893.98 | ಪೂರ್ಣಗ್ರಾಮ |
| 21. | | | ಲಕ್ಕಸಂದ್ರ | 375 | 177.74 | ಪೂರ್ಣಗ್ರಾಮ |
| 22. | | | ಸುಗ್ಗನಹಳ್ಳಿ | 2895 | 917.84 | ಪೂರ್ಣಗ್ರಾಮ |
| 23. | | | ಚಿಕ್ಕಸೂಲಿಕೆರೆ | 503 | 325.50 | ಪೂರ್ಣಗ್ರಾಮ |
| 24. | ರಾಮನಗರ | ಕೂಟಗಲ್ | ದೊಡ್ಡಸೂಲಿಕೆರೆ | 923 | 609.63 | ಪೂರ್ಣಗ್ರಾಮ |
| 25. | | | ಲಕ್ಷ್ಮೀಪುರ | 1595 | 763.56 | ಪೂರ್ಣಗ್ರಾಮ |
| 26. | ರಾಮನಗರ | ಕೈಲಾಂಚ | ಬೆಣ್ಣಹಳ್ಳಿ | 921 | 295.19 | ಪೂರ್ಣಗ್ರಾಮ |
| 27. | | | ಅಣ್ಣಹಳ್ಳಿ | 1154 | 310.99 | ಪೂರ್ಣಗ್ರಾಮ |
| 28. | | | ಮಂಚೇಗೌಡನಪಾಳ್ಯ | 633 | 358.97 | ಪೂರ್ಣಗ್ರಾಮ |
| 29. | | | ಗೋಪಹಳ್ಳಿ | 2707 | 882.08 | ಪೂರ್ಣಗ್ರಾಮ |
| 30. | | | ಬಲೆವೀರನಹಳ್ಳಿ | 79 | 102.1 | ಪೂರ್ಣಗ್ರಾಮ |
| 31. | ರಾಮನಗರ | ಬಿಡದಿ | ಹೆಜ್ಜಾಲ | 3483 | 332.56 | ಪೂರ್ಣಗ್ರಾಮ |
| 32. | | | ಯರೆಪಾಳ್ಯ | 30 | 92.35 | ಪೂರ್ಣಗ್ರಾಮ |
| 33. | | | ಬೋರೆಹಳ್ಳಿ | 266 | 132.91 | ಪೂರ್ಣಗ್ರಾಮ |
| 34. | | | ಗಾಣಕಲ್ಲು | 570 | 204.15 | ಪೂರ್ಣಗ್ರಾಮ |
| 35. | | | ಕೆಂಪದ್ಯಾಪನಹಳ್ಳಿ | 490 | 236.45 | ಪೂರ್ಣಗ್ರಾಮ |
| 36. | | | ಕಾಕರಾಮನಹಳ್ಳಿ | 747 | 222.92 | ಪೂರ್ಣಗ್ರಾಮ |
| 37. | | | ಬನ್ನಿಗೆರೆ | 1448 | 487.45 | ಪೂರ್ಣಗ್ರಾಮ |
| 38. | | | ಬೈರಮಂಗಲ | 2480 | 547.56 | ಪೂರ್ಣಗ್ರಾಮ |
| 39. | | | ಮಂಡಲಹಳ್ಳಿ | 33 | 37.71 | ಪೂರ್ಣಗ್ರಾಮ |
| 40. | | | ಅಳ್ಳಾಳಸಂದ್ರ | 1500 | 594.01 | ಪೂರ್ಣಗ್ರಾಮ |
| 41. | | | ಕಂಚುಗಾರನಹಳ್ಳಿ | 1083 | 637.79 | ಪೂರ್ಣಗ್ರಾಮ |
| 42. | | | ಕಂಚುಗಾರನಹಳ್ಳಿ ಕಾವಲ್ | 24 | 45.13 | ಪೂರ್ಣಗ್ರಾಮ |
| 43. | | | ಕೆಂಪಯ್ಯನ ಪಾಳ್ಯ | 1355 | 160.73 | ಪೂರ್ಣಗ್ರಾಮ |
| 44. | | | ಹೊಸೂರು | 2273 | 1037.11 | ಪೂರ್ಣಗ್ರಾಮ |
| 45. | | | ಗೊಲ್ಲರಪಾಳ್ಯ | 486 | 141.95 | ಪೂರ್ಣಗ್ರಾಮ |
| 46. | | | ವಡೇರಹಳ್ಳಿ | 1287 | 414.86 | ಪೂರ್ಣಗ್ರಾಮ |
| 47. | | | ಗಬ್ಬಾಡಿ | 883 | 170.42 | |
| 48. | ಹಾರೋಹಳ್ಳಿ | ಹಾರೋಹಳ್ಳಿ | ಗಬ್ಬಾಡಿ ಕಾವಲ್ | 74 | 23.64 | ಭಾಗಶಃ ಗ್ರಾಮ |
| 49. | | | ಕಗ್ಗಲಹಳ್ಳಿ | 1164 | 119.24 | |
| 50. | | | ಮುಡೇನಹಳ್ಳಿ | 1140 | 379.83 | ಪೂರ್ಣಗ್ರಾಮ |
| 51. | | | ಯಡಮಡು | 880 | 62.87 | ಭಾಗಶಃ ಗ್ರಾಮ |
| 52. | | | ಕೆ.ಜಿ. ಕಗ್ಗಲೀಪುರ | 6907 | 576.31 | |
| 53. | | | ಉತ್ತರಿ | 1452 | 495.51 | ಪೂರ್ಣಗ್ರಾಮ |
| 54. | | | ಕೆ.ಜಿ. ಚೌಡನಹಳ್ಳಿ | 1371 | 389.16 | ಪೂರ್ಣಗ್ರಾಮ |
| 55. | ಬೆಂಗಳೂರು ದಕ್ಷಿಣ | ಉತ್ತರಹಳ್ಳಿ | ಕೆ.ಜಿ. ನೆಲಗುಳಿ | 1198 | 296.28 | ಭಾಗಶಃ ಗ್ರಾಮ |
| 56. | | | ನಾಗನಾಯಕನಹಳ್ಳಿ | 769 | 167.77 | ಪೂರ್ಣಗ್ರಾಮ |
| 57. | | | ನೆಟ್ಟಿಗೆರೆ | 1847 | 143.89 | |
| 58. | | | ರಾವುಗೋಡ್ಲು | 1397 | 20.72 | ಭಾಗಶಃ ಗ್ರಾಮ |
| 59. | | | ಸೋಮನಹಳ್ಳಿ | 4655 | 51.32 | |

| ಕನಕಪುರ ಸ್ಥಳೀಯ ಯೋಜನಾ ಪ್ರದೇಶದಿಂದ ಹಿಂಪಡೆದು, ಗ್ರೇಟರ್ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಸೇರ್ಪಡೆಗೊಳಿಸಿದ ಗ್ರಾಮಗಳ ವಿವರಗಳು. | | | | | | |
|---|---|---|---|---|---|---|
| 60. | ಕನಕಪುರ | ಕಸಬಾ | ಅರಳಾಳು | 1790 | 72.90 | ಭಾಗಶಃ ಗ್ರಾಮ |
| 61. | | | ಬೇಕುಪ್ಪೆ | 821 | 49.74 | |
| 62. | | | ಚೌಕಸಂದ್ರ | 1205 | 196.40 | |
| 63. | | | ಹೊರಳಗಲ್ಲು | 2497 | 35.28 | |
| 64. | | | ಕೂನೂರು | 880 | 98.33 | |
| 65. | | | ಶೀಗೇಕೋಟೆ | 1551 | 153.59 | |
| 66. | | | ಶಿವನಹಳ್ಳಿ | 1799 | 260.67 | |
| 67. | | | ತಿಗಳರ ಹೊಸಹಳ್ಳಿ | 1255 | 315.97 | |
| | | | **ಒಟ್ಟು** | **104620** | **24544.78** | |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ರಾಜೇಶ್ ಎಸ್.ಸೂಳಿಕೇರಿ)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.
(ಬಿಡಿಎ & ಬೆಂ-1).

## ಅನುಬಂಧ-2

## ಗ್ರೇಟರ್ ಬೆಂಗಳೂರು ಪರಿಷ್ಕೃತ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಎಲ್ಲೆಯ ವಿವರಣೆ

ಗ್ರೇಟರ್ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶವು ಹಾಲಿ ಯೋಜನಾ ಪ್ರದೇಶವನ್ನು ಒಳಗೊಂಡಂತೆ ಪರಿಷ್ಕೃತ ಸ್ಥಳೀಯ ಯೋಜನಾ ಪ್ರದೇಶವು ಈ ಕೆಳಗಿನಂತೆ ನಾಲ್ಕು ಸಮೂಹಗಳು ಇರುತ್ತವೆ.

ಪ್ರಸ್ತಾವಿತ ಗ್ರೇಟರ್ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶವು ಹಾರೋಹಳ್ಳಿ, ಉತ್ತರಹಳ್ಳಿ, ರಾಮನಗರ, ಬಿಡದಿ, ಕೂಟಗಲ್ ಮತ್ತು ಕೈಲಾಂಚ ಹೋಬಳಿಗಳಿಗೆ ಸೇರಿದ 49 ಪೂರ್ಣ ಕಂದಾಯ ಗ್ರಾಮಗಳು ಹಾಗೂ ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿಯ ಕೆ.ಜಿ ಕಗ್ಗಲೀಪುರ, ಕೆ.ಜಿ ನೆಲಗುಳಿ ಮತ್ತು ಸೋಮನಹಳ್ಳಿ ಗ್ರಾಮಗಳ ಭಾಗಶಃ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿಯ ಗಬ್ಬಾಡಿ ಮತ್ತು ಕಗ್ಗಲಹಳ್ಳಿ ಗ್ರಾಮಗಳ ಭಾಗಶಃ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿಗೆ ಸೇರಿದ ವಡೇರಹಳ್ಳಿ ಪೂರ್ಣ ಕಂದಾಯ ಗ್ರಾಮ ಮತ್ತು ಬೆಂಗಳೂರು ದಕ್ಷಿಣ, ಉತ್ತರಹಳ್ಳಿ ಹೋಬಳಿಗೆ ಸೇರಿದ ನೆಟ್ಟಿಗೆರೆ. ರಾವುಗೋಡ್ಲು ಗ್ರಾಮಗಳ ಭಾಗಶಃ ಮತ್ತು ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿಗೆ ಸೇರಿದ ಯಡಮಡು, ಕಗ್ಗಲಹಳ್ಳಿ, ಗಬ್ಬಾಡಿ, ಗಬ್ಬಾಡಿಕಾವಲ್ ಮತ್ತು ಮುಡೇನಹಳ್ಳಿ ಗ್ರಾಮಗಳ ಭಾಗಶಃ ಹಾಗೂ ಕನಕಪುರ ತಾಲ್ಲೂಕು ಕಸಬಾ ಹೋಬಳಿ ಅರಳಾಳು, ಬೇಕುಪ್ಪೆ, ಚೌಕಸಂದ್ರ, ಹೊರಳಗಲ್ಲು. ಕೂನೂರು, ಶೀಗೇಕೋಟೆ, ಶಿವನಹಳ್ಳಿ, ತಿಗಳರ ಹೊಸಹಳ್ಳಿ ಗ್ರಾಮಗಳ ಭಾಗಶಃ ಗ್ರಾಮಗಳನ್ನು ಒಳಗೊಂಡಿದ್ದು, ವಿವರಗಳು ಈ ಕೆಳಕಂಡಂತಿರುತ್ತದೆ.

**ಸಮೂಹ-1 :** ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಎಲ್ಲೆಯು ಕೆ.ಜಿ ಕಗ್ಗಲೀಪುರ (ಭಾಗಶಃ) ಗ್ರಾಮದ 'ಎ' ಬಿಂದುವಿನ ಈಶಾನ್ಯ ದಿಕ್ಕಿನಿಂದ ಅದೇ ಗ್ರಾಮದ ಗಡಿಯಲ್ಲಿ ಚಲಿಸುತ್ತಾ, ಗ್ರಾಮದ ಉತ್ತರ ದಿಕ್ಕಿನಲ್ಲಿ ತಲುಪಿ ನಂತರ ಆಗ್ನೇಯ ದಿಕ್ಕಿಗೆ ಚಲಿಸುತ್ತಾ, ಬೆಂಗಳೂರು-ಕನಕಪುರ ರಾಷ್ಟ್ರೀಯ

ಹೆದ್ದಾರಿ 209 ಸಂದಿಸುವ ಬಿಂದುವಿನಿಂದ ರಾಷ್ಟ್ರೀಯ ಹೆದ್ದಾರಿ 209ರ ಪಥವು ದಕ್ಷಿಣಾಭಿಮುಖವಾಗಿ ಚಲಿಸುವ ಬಲಬದಿಗೆ ಬರುವ ಕಗ್ಗಲೀಪುರ ಗ್ರಾಮದ (ಭಾಗಶಃ), ಸೋಮನಹಳ್ಳಿ ಗ್ರಾಮದ (ಭಾಗಶಃ), ನೆಲಗುಳಿ ಗ್ರಾಮದ (ಭಾಗಶಃ), ನೆಟ್ಟಿಗೆರೆ ಗ್ರಾಮದ (ಭಾಗಶಃ), ರಾವುಗೋಡ್ಲು ಗ್ರಾಮದ (ಭಾಗಶಃ), ಎಡಮಡು ಗ್ರಾಮದ (ಭಾಗಶಃ), ಕಗ್ಗಲಹಳ್ಳಿ ಗ್ರಾಮದ (ಭಾಗಶಃ), ಗಬ್ಬಾಡಿ ಗ್ರಾಮದ (ಭಾಗಶಃ) ಹಾಗೂ ಗಬ್ಬಾಡಿ ಕಾವಲ್ ಗ್ರಾಮದ (ಭಾಗಶಃ) ಒಳಗೊಂಡಂತೆ ರಾಷ್ಟ್ರೀಯ ಹೆದ್ದಾರಿ 209 ಸಂದಿಸುವ ಬಿಂದುವಿನ ಈಶಾನ್ಯ ದಿಕ್ಕಿನಿಂದ ಅದೇ ಗ್ರಾಮದ ಗಡಿಯಿಂದ ಚಲಿಸುತ್ತಾ, ಗಬ್ಬಾಡಿ ಗ್ರಾಮದ ಗಡಿಯೊಂದಿಗೆ ಚಲಿಸುತ್ತಾ, ಮುಡೇನಹಳ್ಳಿ ಗ್ರಾಮದ ಗಡಿಯನ್ನು ತಲುಪಿ ಈ ಬಿಂದುವಿನಿಂದ ದಕ್ಷಿಣಾಭಿಮುಖವಾಗಿ ಗ್ರಾಮದ ಗಡಿಯೊಂದಿಗೆ ಚಲಿಸುತ್ತಾ, ಕಂಚುಗಾರನಹಳ್ಳಿ ಗ್ರಾಮದ ಆಗ್ನೇಯ ಮೂಲೆಗೆ ತಲುಪುತ್ತದೆ. ಕಂಚುಗಾರನಹಳ್ಳಿ ಗ್ರಾಮದ ಗಡಿಯೊಂದಿಗೆ ಪಶ್ಚಿಮಾಭಿಮುಖವಾಗಿ ಚಲಿಸುತ್ತಾ, ಕಂಚುಗಾರನಹಳ್ಳಿ ಕಾವಲ್ ಗ್ರಾಮದ ಗಡಿಯನ್ನು ತಲುಪಿ, ಅದೇ ಗ್ರಾಮದ ನೈರುತ್ಯ ಮೂಲೆಯನ್ನು ತಲುಪುತ್ತದೆ. ಕೆಂಪಯ್ಯನಪಾಳ್ಯ ಗ್ರಾಮದ ಆಗ್ನೇಯ ಮೂಲೆಯಿಂದ ಪ್ರಾರಂಭಗೊಂಡು ಪಶ್ಚಿಮಾಭಿಮುಖವಾಗಿ ಚಲಿಸುತ್ತಾ, ಉತ್ತರಕ್ಕೆ ತಿರುಗಿ ಅದೇ ಗ್ರಾಮದ ವಾಯುವ್ಯ ಮೂಲೆಯನ್ನು ತಲುಪುತ್ತದೆ.

ಗೋಪಹಳ್ಳಿ ಗ್ರಾಮದ ಆಗ್ನೆಯ ಮೂಲೆಯಿಂದ ಪ್ರಾರಂಭಗೊಂಡು ಪಶ್ಚಿಮಾಭಿಮುಖವಾಗಿ ಚಲಿಸುತ್ತಾ, ದಕ್ಷಿಣಕ್ಕೆ ತಿರುಗಿ ಅದೇ ಗ್ರಾಮದ ನೈರುತ್ಯ ಮೂಲೆಯನ್ನು ತಲುಪುತ್ತದೆ. ಬೆಣ್ಣಹಳ್ಳಿ ಗ್ರಾಮದ ಆಗ್ನೆಯ ಮೂಲೆಯಿಂದ ಪ್ರಾರಂಭಗೊಂಡು ಪಶ್ಚಿಮಕ್ಕೆ ತಿರುಗಿ ಅದೇ ಗ್ರಾಮದ ಗಡಿಯೊಂದಿಗೆ ಚಲಿಸುತ್ತಾ, ಅಣ್ಣಹಳ್ಳಿ ಗ್ರಾಮದ ಗಡಿಗೆ ಬಂದು ಸೇರುತ್ತದೆ. ನಂತರ ಅಣ್ಣಹಳ್ಳಿ ಗ್ರಾಮದ ಗಡಿಯೊಂದಿಗೆ ದಕ್ಷಿಣಾಭಿಮುಖವಾಗಿ ಚಲಿಸುತ್ತಾ, ಅದೇ ಗ್ರಾಮದ ಆಗೇಯ ಮೂಲೆಗೆ ತಲುಪುತ್ತದೆ. ನಂತರ ಅದೇ ಗ್ರಾಮದ ಗಡಿಯೊಂದಿಗೆ ಪಶ್ಚಿಮಾಭಿಮುಖವಾಗಿ ಚಲಿಸಿ ನಂತರ ಉತ್ತರಾಭಿಮುಖವಾಗಿ ಚಲಿಸಿ ಆದೇ ಗ್ರಾಮದ ವಾಯುವ್ಯ ಮೂಲೆಯನ್ನು ತಲುಪುತ್ತದೆ. ಬೆಣ್ಣಹಳ್ಳಿ ಗ್ರಾಮದ ನೈರುತ್ಯ ಮೂಲೆಯಿಂದ ಪ್ರಾರಂಭಗೊಂಡು ಉತ್ತರಾಭಿಮುಖವಾಗಿ ಚಲಿಸುತ್ತಾ, ಮಂಚೇಗೌಡನಹಳ್ಳಿ ಗ್ರಾಮದ ಗಡಿಯನ್ನು ತಲುಪಿ ಉತ್ತರಾಭಿಮುಖವಾಗಿ ಚಲಿಸುತ್ತಾ, ಪೂರ್ವಕ್ಕೆ ತಿರುಗಿ ಅದೇ ಗ್ರಾಮದ ಈಶಾನ್ಯ ಮೂಲೆಯನ್ನು ತಲುಪುತ್ತದೆ. ರಾಮನಹಳ್ಳಿ ಗ್ರಾಮದ ನೈರುತ್ಯ ಮೂಲೆಯಿಂದ ಪ್ರಾರಂಭಗೊಂಡು ಉತ್ತರಾಭಿಮುಖವಾಗಿ ಚಲಿಸುತ್ತಾ, ಇಟ್ಟಮಡು ಗ್ರಾಮದ ವಾಯುವ್ಯ ಮೂಲೆಯನ್ನು ತಲುಪಿ ಗ್ರಾಮದ ಗಡಿಯೊಂದಿಗೆ ಪೂರ್ವಾಭಿಮುಖವಾಗಿ ಚಲಿಸುತ್ತಾ, ಅಬ್ಬನಕುಪ್ಪೆ ಗ್ರಾಮದ ನೈರುತ್ಯ ಮೂಲೆಯನ್ನು ತಲುಪುತ್ತದೆ. ಇದೇ ಗ್ರಾಮದ ಉತ್ತರ ಗಡಿಯೊಂದಿಗೆ ಚಲಿಸುತ್ತಾ ಬಲೆವೀರನಹಳ್ಳಿ ಗ್ರಾಮದ ವಾಯುವ್ಯ ಮೂಲೆಯನ್ನು ತಲುಪುತ್ತದೆ.

ಬಲೆವೀರನಹಳ್ಳಿ ಗ್ರಾಮದ ಉತ್ತರ ಗಡಿಯೊಂದಿಗೆ ಚಲಿಸುತ್ತಾ ಯರೆಪಾಳ್ಯ ಗ್ರಾಮದ ಉತ್ತರ ಗಡಿಗೆ ಬಂದು ತಲುಪುತ್ತದೆ. ಇದೇ ಗ್ರಾಮದ ಗಡಿಯಿಂದ ಚಲಿಸಿ ಹೊಸೂರು ಗ್ರಾಮದ ವಾಯುವ್ಯ ಮೂಲೆಯನ್ನು ತಲುಪಿ ನಂತರ ಪೂರ್ವಾಭಿಮುಖವಾಗಿ ಚಲಿಸುತ್ತಾ ಮಂಡ್ಲಹಳ್ಳಿ ಗ್ರಾಮದ ನೈರುತ್ಯ ಮೂಲೆಯನ್ನು ತಲುಪುತ್ತದೆ. ಇದೇ ಗ್ರಾಮದ ಗಡಿಯೊಂದಿಗೆ ಚಲಿಸಿ ನೈರುತ್ಯಕ್ಕೆ ತಿರುಗಿ ಹೊಸೂರು ಗ್ರಾಮದ ಈಶಾನ್ಯ ಮೂಲೆಯನ್ನು ತಲುಪುತ್ತದೆ. ಇದೇ ಮೂಲೆಯಿಂದ ಆಗ್ನೆಯ ದಿಕ್ಕಿಗೆ ಚಲಿಸುತ್ತಾ ಗೊಲ್ಲರಪಾಳ್ಯ ಗ್ರಾಮದ ವಾಯುವ್ಯ ಮೂಲೆಯನ್ನು ತಲುಪುತ್ತದೆ. ಇದೇ ಮೂಲೆಯಿಂದ ಗೊಲ್ಲರಪಾಳ್ಯ ಗ್ರಾಮದ ಗಡಿಯೊಂದಿಗೆ ಚಲಿಸುತ್ತಾ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿಯ ಕೆ.ಜಿ.ನಲಗುಳಿ ಗ್ರಾಮದ ನೈರುತ್ಯ ಮೂಲೆಗೆ ಬಂದು ತಲುಪುತ್ತದೆ. ಈ ಬಿಂದಿವಿನಿಂದ ಕೆ.ಜಿ.ನೆಲಗುಳಿ ಗ್ರಾಮದ ಪಶ್ಚಿಮ ಗಡಿಯೊಂದಿಗೆ ಉತ್ತರಾಭಿಮುಖವಾಗಿ ಚಲಿಸುತ್ತಾ ಕೆ.ಜಿ.ಚೂಡನಹಳ್ಳಿ ಗ್ರಾಮದ ನೈರುತ್ಯ ಮೂಲೆಗೆ ಬಂದು ತಲುಪುತ್ತದೆ. ಇದೇ ಬಿಂದುವಿನಿಂದ ಇದೇ ಗ್ರಾಮದ ಗಡಿಯೊಂದಿಗೆ ಉತ್ತರಾಭಿಮುಖವಾಗಿ ಚಲಿಸುತ್ತಾ, ನಾಗನಾಯಕನಹಳ್ಳಿ ಗ್ರಾಮದ ದಕ್ಷಿಣ ಮೂಲೆಗೆ ಬಂದು ತಲುಪುತ್ತದೆ. ಈ ಬಿಂದುವಿನಿಂದ ಇದೇ ಗ್ರಾಮದ ಗಡಿಯೊಂದಿಗೆ ವಾಯುವ್ಯ ದಿಕ್ಕಿಗೆ ಚಲಿಸುತ್ತಾ ನಂತರ ಉತ್ತರಾಭಿಮುಖವಾಗಿ ಚಲಿಸುತ್ತಾ, ನಂತರ ಪೂರ್ವಕ್ಕೆ ತಿರುಗಿ ಚೂಡನಹಳ್ಳಿ ಗ್ರಾಮದ ವಾಯುವ್ಯ ಮೂಲೆಗೆ ಬಂದು ತಲುಪುತ್ತದೆ. ಈ ಬಿಂದುವಿನಿಂದ ಇದೇ ಗ್ರಾಮದ ಗಡಿಯೊಂದಿಗೆ ಚಲಿಸುತ್ತಾ, ಉತ್ತರಿ ಗ್ರಾಮದ ನೈರುತ್ಯ ಮೂಲೆಯನ್ನು ತಲುಪುತ್ತದೆ. ಇದೇ ಗ್ರಾಮದ

ಗಡಿಯೊಂದಿಗೆ ಉತ್ತರಾಭಿಮುಖವಾಗಿ ಚಲಿಸುತ್ತಾ ನಂತರ ಪೂರ್ವಕ್ಕೆ ತಿರುಗಿ 'ಎ' ಬಿಂದುವಿಗೆ ಬಂದು ತಲುಪುತ್ತದೆ.

**ಸಮೂಹ-2:** ಸ್ಥಳೀಯ ಯೋಜನಾ ಪ್ರದೇಶದ ಸಮೂಹ-2ರ ವ್ಯಾಪ್ತಿಯು ಐವಾಗಿಲು ಗ್ರಾಮದ 'ಬಿ' ಬಿಂದುವಿನ ಪಶ್ಚಿಮಾಭಿಮುಖವಾಗಿ ಚಲಿಸುತ್ತಾ, ಕೆಂಪನಹಳ್ಳಿ ಗ್ರಾಮದ ನೈರುತ್ಯ ಮೂಲೆಯನ್ನು ತಲುಪುತ್ತದೆ. ಮಾಯಗಾನಹಳ್ಳಿ ಗ್ರಾಮದ ಆಗ್ನೇಯ ಮೂಲೆಯಿಂದ ಪ್ರಾರಂಭಗೊಂಡು ದಕ್ಷಿಣಾಭಿಮುಖವಾಗಿ ಚಲಿಸುತ್ತಾ, ಕೇತೋಹಳ್ಳಿ ಗ್ರಾಮದ ಈಶಾನ್ಯ ಮೂಲೆ ತಲುಪಿ ಆದೇ ಗ್ರಾಮದ ಗಡಿಯೊಂದಿಗೆ ದಕ್ಷಿಣಾಭಿಮುಖವಾಗಿ ಚಲಿಸುತ್ತಾ, ಬಳಗುಳಿ ಗ್ರಾಮದ ಈಶಾನ್ಯ ಮೂಲೆಯನ್ನು ತಲುಪುತ್ತದೆ. ಅದೇ ಗ್ರಾಮದ ಗಡಿಯೊಂದಿಗೆ ದಕ್ಷಿಣಾಭಿಮುಖವಾಗಿ ಚಲಿಸುತ್ತಾ, ಬಸವನಪುರ ಗ್ರಾಮದ ಗಡಿಯೊಂದಿಗೆ ಚಲಿಸುತ್ತಾ, ಮೈಸೂರು-ಬೆಂಗಳೂರು ಮಾರ್ಗವಾಗಿ ಹೋಗುವ ರಾಷ್ಟ್ರೀಯ ಹೆದ್ದಾರಿ ಹಾಗೂ ರೈಲ್ವೆ ಮಾರ್ಗವನ್ನು ದಾಟಿ ಕೇತೋಹಳ್ಳಿ ಗ್ರಾಮದ ಪಶ್ಚಿಮ ಗಡಿಯನ್ನು ತಲುಪಿ ಅದೇ ಗ್ರಾಮದ ಗಡಿಯೊಂದಿಗೆ ಚಲಿಸುತ್ತಾ, ಮಾದಾಪುರ ಗ್ರಾಮದ ನೈರುತ್ಯ ಮೂಲೆಯನ್ನು ತಲುಪುತ್ತದೆ. ಹಳ್ಳಿಮಾಳ ಗ್ರಾಮದ ಈಶಾನ್ಯ ಮೂಲೆಯಿಂದ ಪ್ರಾರಂಭಗೊಂಡು ದಕ್ಷಿಣಾಭಿಮುಖವಾಗಿ ಗ್ರಾಮದ ಗಡಿಯೊಂದಿಗೆ ಚಲಿಸುತ್ತಾ, ಹರೀಸಂದ್ರ ಗ್ರಾಮದ ನೈರುತ್ಯ ಮೂಲೆಯನ್ನು ತಲುಪಿ ಉತ್ತರಾಭಿಮುಖವಾಗಿ ಚಲಿಸುತ್ತಾ, ಬೊಮ್ಮಾಚನಹಳ್ಳಿ ಗ್ರಾಮದ ನೈರುತ್ಯ ಮೂಲೆಯನ್ನು ತಲುಪಿ ಉತ್ತರಾಭಿಮುಖವಾಗಿ ಚಲಿಸಿ ಅದೇ ಗ್ರಾಮದ ಗಡಿಯೊಂದಿಗೆ ಪೂರ್ವಾಭಿಮುಖವಾಗಿ ಚಲಿಸಿ, ಲಕ್ಷ್ಮೀಪುರ ಗ್ರಾಮದ ದಕ್ಷಿಣ ಭಾಗಕ್ಕೆ ತಲುಪಿ ಅದೇ ಬಿಂದುವಿನಿಂದ ವಾಯುವ್ಯ ದಿಕ್ಕಿಗೆ ಚಲಿಸುತ್ತಾ, ಅದೇ ಗ್ರಾಮದ ಪಶ್ಚಿಮ ದಿಕ್ಕಿಗೆ ತಲುಪಿ ನಂತರ ಈಶಾನ್ಯ ದಿಕ್ಕಿಗೆ ಚಲಿಸುತ್ತಾ, ಚಿಕ್ಕಸೂಲಿಕೆರೆ ಗ್ರಾಮದ ನೈರುತ್ಯ ಮೂಲೆಯನ್ನು ತಲುಪುತ್ತದೆ. ಅದೇ ಗ್ರಾಮದ ಗಡಿಯೊಂದಿಗೆ ಉತ್ತರಾಭಿಮುಖವಾಗಿ ಚಲಿಸುತ್ತಾ, ದೊಡ್ಡಸೂಲಿಕೆರೆ ಗ್ರಾಮದ ನೈರುತ್ಯ ಮೂಲೆಯನ್ನು ತಲುಪಿ ಉತ್ತರಾಭಿಮುಖವಾಗಿ ಚಲಿಸುತ್ತಾ, ಪೂರ್ವಕ್ಕೆ ತಿರುಗಿ ನಂತರ ದಕ್ಷಿಣಕ್ಕೆ ತಿರುಗಿ ಅದೇ ಗ್ರಾಮದ ಆಗ್ನೆಯ ಮೂಲೆಯನ್ನು ತಲುಪುತ್ತದೆ.

ಚಿಕ್ಕಸೂಲಿಕೆರೆ ಗ್ರಾಮದ ಈಶಾನ್ಯ ಮೂಲೆಯಿಂದ ಪ್ರಾರಂಭಗೊಂಡು ದಕ್ಷಿಣಾಭಿಮುಖವಾಗಿ ಚಲಿಸುತ್ತಾ, ಪೂರ್ವಕ್ಕೆ ತಿರುಗಿ ನಂತರ ಉತ್ತಾರಭಿಮುಖವಾಗಿ ಚಲಿಸಿ ಹಗಲಹಳ್ಳಿ ಗ್ರಾಮದ ವಾಯುವ್ಯ ಮೂಲೆಯನ್ನು ತಲುಪಿ ಅದೇ ಗ್ರಾಮದ ಗಡಿಯೊಂದಿಗೆ ಚಲಿಸುತ್ತಾ ಗಾಣಕಲ್ಲು ಗ್ರಾಮದ ವಾಯುವ್ಯ ದಿಕ್ಕಿಗೆ ಹಾಗೂ ಕೆಂಪದ್ಯಾಪನಹಳ್ಳಿ ಗ್ರಾಮದ ನೈರುತ್ಯ ಮೂಲೆಯನ್ನು ತಲುಪಿ ಅದೇ ಗ್ರಾಮದ ಪಶ್ಚಿಮ ಗಡಿಯೊಂದಿಗೆ ಉತ್ತಾರಭಿಮುಖವಾಗಿ ಚೆಲ್ಲಿಸುತ್ತಾ ಅದೇ ಗ್ರಾಮದ ವಾಯುವ್ಯ ಮೂಲೆಯನ್ನು ತಲುಪುತ್ತದೆ. ಅದೇ ಗ್ರಾಮದ ಗಡಿಯೊಂದಿಗೆ ಪೂರ್ವಾಭಿಮುಖವಾಗಿ ಚಲಿಸುತ್ತಾ ನಂತರ ದಕ್ಷಿಣಾಭಿಮುಖವಾಗಿ ಚಲಿಸುತ್ತಾ ಗಾಣಕಲ್ಲು ಗ್ರಾಮದ ಈಶಾನ್ಯ ಮೂಲೆಗೆ ತಲುಪುತ್ತದೆ.

ಗಾಣಕಲ್ಲು ಗ್ರಾಮದ ಗಡಿಯೊಂದಿಗೆ ಚಲಿಸುತ್ತಾ ಗಾಣಕಲ್ಲು ಗ್ರಾಮದ ಪೂರ್ವ ಮೂಲೆಯನ್ನು ತಲುಪಿ ಅದೇ ಗ್ರಾಮದ ಗಡಿಯೊಂದಿಗೆ ಚಲಿಸುತ್ತಾ ಬೋರೇಹಳ್ಳಿ ಗ್ರಾಮದ ಉತ್ತರ ಗಡಿಯನ್ನು ತಲುಪಿ ಆದೇ ಗ್ರಾಮದ ಗಡಿಯೊಂದಿಗೆ ಚಲಿಸುತ್ತಾ ಕಾಕಮಾರನಹಳ್ಳಿ ಗ್ರಾಮದ ಪೂರ್ವ ಗಡಿಯನ್ನು ತಲುಪಿ ಅದೇ ಗ್ರಾಮದ ಗಡಿಯೊಂದಿಗೆ ಚಲಿಸುತ್ತಾ ಮುದ್ದಾಪುರ ಕರೇನಹಳ್ಳಿ ಗ್ರಾಮದ ಪೂರ್ವ ಗಡಿಯನ್ನು ತಲುಪಿ ಅದೇ ಗ್ರಾಮದ ಗಡಿಯೊಂದಿಗೆ ಚಲಿಸುತ್ತಾ ಕೆಂಚನಕುಪ್ಪೆ ಗ್ರಾಮದ ಉತ್ತರ ಗಡಿಯನ್ನು ತಲುಪಿ ಅದೇ ಗ್ರಾಮದ ಗಡಿಯೊಂದಿಗೆ ಚಲಿಸುತ್ತಾ ಬಿಡದಿ ಗ್ರಾಮದ ಪಶ್ಚಿಮ ಗಡಿಯನ್ನು ತಲುಪಿ ಅದೇ ಗ್ರಾಮದ ಗಡಿಯೊಂದಿಗೆ ಚಲಿಸುತ್ತಾ ಮೈಸೂರಿನಿಂದ-ಬೆಂಗಳೂರು ಮಾರ್ಗವಾಗಿ ಹೋಗುವ ರಾಷ್ಟ್ರೀಯ ಹೆದ್ದಾರಿ ಹಾಗೂ ರೈಲ್ವೆ ಮಾರ್ಗವನ್ನು ದಾಟಿ ಇದೇ ಗ್ರಾಮದ ಈಶಾನ್ಯ ಮೂಲೆಯನ್ನು ತಲುಪುತ್ತದೆ.

ಈ ಬಿಂದುವಿನಿಂದ ಬಿಡದಿ ಗ್ರಾಮದ ದಕ್ಷಿಣಾಭಿಮುಖವಾಗಿ ಚಲಿಸುತ್ತಾ, ಕೆಂಚನಕುಪ್ಪೆ ಗ್ರಾಮದ ಪೂರ್ವ ದಿಕ್ಕಿನ ಮೂಲೆಯನ್ನು ತಲುಪುತ್ತದೆ. ಇದೇ ಗ್ರಾಮದ ಗಡಿಯೊಂದಿಗೆ

ದಕ್ಷಿಣಾಭಿಮುಖವಾಗಿ ಚಲಿಸುತ್ತಾ, ಕಲ್ಲುಗೋಪನಹಳ್ಳಿ ಗ್ರಾಮದ ಈಶಾನ್ಯ ಮೂಲೆಯನ್ನು ತಲುಪುತ್ತದೆ. ಇದೇ ಗ್ರಾಮದ ಗಡಿಯೊಂದಿಗೆ ದಕ್ಷಿಣಾಧಿಮುಖವಾಗಿ ಚಲಿಸುತ್ತಾ, ಇದೇ ಗ್ರಾಮದ ಆಗ್ನೇಯ ಮೂಲೆಗೆ ಬಂದು ತಲುಪಿ ನಂತರ ಪೂರ್ವಕ್ಕೆ ತಿರುಗಿ ಕೆಂಪನಹಳ್ಳಿ ಗ್ರಾಮದ ಈಶಾನ್ಯ ಮೂಲೆಗೆ ಬಂದು ತಲುಪುತ್ತದೆ. ಇದೇ ಮೂಲೆಯಿಂದ ಕೆಂಪನಹಳ್ಳಿ ಗ್ರಾಮದ ಗಡಿಯೊಂದಿಗೆ ದಕ್ಷಿಣಾಭಿಮುಖವಾಗಿ ಚಲಿಸುತ್ತಾ ಐವಾಗಿಲು ಗ್ರಾಮದ ಗಡಿಗೆ ತಲುಪಿ, ನಂತರ ಐವಾಗಿಲು ಗ್ರಾಮದ ಗಡಿಯೊಂದಿಗೆ ದಕ್ಷಿಣಾಭಿಮುಖವಾಗಿ ಚಲಿಸುತ್ತಾ 'ಬಿ' ಬಿಂದುವಿಗೆ ಬಂದು ಸೇರುತ್ತದೆ.

**ಸಮೂಹ-3:** ಸ್ಥಳೀಯ ಯೋಜನಾ ಪ್ರದೇಶದ ಸಮೂಹ-3ರ ವ್ಯಾಪ್ತಿಯು ಹೆಜ್ಜಾಲ ಪೂರ್ಣ ಕಂದಾಯ ಗ್ರಾಮವಾಗಿರುತ್ತದೆ.

**ಸಮೂಹ-4:**ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯು ಬಿಂದು 'ಸಿ' ಅಂದರೆ, ಕೊಯಂಬತ್ತೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ-209ರ ಪೂರ್ವಗಡಿ ಶಿವನಹಳ್ಳಿ ಗ್ರಾಮದ ಸ.ನಂ.50ರ ವಾಯುವ್ಯ ಬಿಂದುವಿನಿಂದ ಪ್ರಾರಂಭವಾಗಿ ಸ.ನಂ.50ರ ಪೂರ್ವಾಭಿಮುಖವಾಗಿ ಉತ್ತರಗಡಿಯಲ್ಲಿ ಸಾಗಿ ಸ.ನಂ.50ರ ಈಶಾನ್ಯ ಬಿಂದುವನ್ನು ತಲುಪುತ್ತದೆ. ಸ.ನಂ.50, ಸ.ನಂ.59ರ ದಕ್ಷಿಣಾಭಿಮುಖವಾಗಿ ಪೂರ್ವಗಡಿಯಲ್ಲಿ ಸಾಗುತ್ತಾ, ಸ.ನಂ.387 ರ ವಾಯುವ್ಯ ಬಿಂದುವನ್ನು ತಲುಪುತ್ತದೆ. ನಂತರ ಇದೇ ಗ್ರಾಮದ ಸ.ನಂ. 387, 385 ರ ಪೂರ್ವಾಭಿಮುಖವಾಗಿ ಉತ್ತರ ಗಡಿಯಲ್ಲಿ ಸಾಗುತ್ತಾ, ಸ.ನಂ. 385 ರ ಈಶಾನ್ಯ ಬಿಂದುವಿನಲ್ಲಿ ತಲುಪಿ, ಸ.ನಂ.67ರಲ್ಲಿ ಪೂರ್ವಾಭಿಮುಖವಾಗಿ ಸಾಗುತ್ತಾ, ಸ.ನಂ. 433 ರ ಪೂರ್ವಾಭಿಮುಖವಾಗಿ ಉತ್ತರ ಗಡಿಯಲ್ಲಿ ಸಾಗುತ್ತಾ, ಸ.ನಂ. 67 ರಲ್ಲಿ ಪೂರ್ವಾಭಿಮುಖವಾಗಿ ಸಾಗಿ, ಅರಳಾಳು ಗ್ರಾಮದ ಗಡಿಯನ್ನು ಸಂಧಿಸಿ ಸ.ನಂ.302ರ ವಾಯುವ್ಯ ಬಿಂದುವನ್ನು ತಲುಪುತ್ತದೆ. ನಂತರ ಇದೇ ಗ್ರಾಮದ ಸ.ನಂ.302ರ ಪೂರ್ವಾಭಿಮುಖವಾಗಿ ಉತ್ತರಗಡಿಯಲ್ಲಿ ಸಾಗುತ್ತಾ, ಸ.ನಂ.302ರ ಈಶಾನ್ಯ ಮೂಲೆಯನ್ನು ತಲುಪಿ, ಸ.ನಂ.145ರಲ್ಲಿ ಪೂರ್ವಾಭಿಮುಖವಾಗಿ ಸಾಗುತ್ತ, ಸ.ನಂ.243ರ ಈಶಾನ್ಯ ಬಿಂದುವನ್ನು ತಲುಪುತ್ತದೆ. ನಂತರ ಇದೇ ಗ್ರಾಮದ ಸ.ನಂ.273, 124, 125, 127, 113, 112ರ ಪೂರ್ವಾಭಿಮುಖವಾಗಿ ಉತ್ತರಗಡಿಯಲ್ಲಿ ಸಾಗಿ ರಾಜ್ಯ ಹೆದ್ದಾರಿ ಸಂಖ್ಯೆ-92ರ ಮಧ್ಯಬಿಂದುವನ್ನು ತಲುಪುತ್ತದೆ. ರಾಜ್ಯ ಹೆದ್ದಾರಿ-92ರ ದಕ್ಷಿಣಾಭಿಮುಖವಾಗಿ ರಸ್ತೆ ಮಧ್ಯಭಾಗದಲ್ಲಿ ಚಲಿಸುತ್ತಾ, ಅರಳಾಳು ಗ್ರಾಮದಗಡಿ, ಬೇಕು ಗ್ರಾಮದಗಡಿ, ಚೌಕಸಂದ್ರ ಗ್ರಾಮದಗಡಿ, ತಿಗಳರಹೊಸಹಳ್ಳಿ ಗ್ರಾಮದ ಗಡಿಯನ್ನು ಸಂದಿಸಿ, ಕೂನೂರು ಗ್ರಾಮದ ಸ.ನಂ.108ರ ಆಗ್ನೇಯ ಬಿಂದುವನ್ನು ತಲುಪುತ್ತದೆ. ನಂತರ ಇದೇ ಗ್ರಾಮದ ಮಜರೆ ಹುಲಿಬೇಲಿ ಗ್ರಾಮಠಾಣದ ಗಡಿಗುಂಟಾ ಪಶ್ಚಿಮಾಭಿಮುಖವಾಗಿ, ದಕ್ಷಿಣಾಭಿಮುಖವಾಗಿ ಸಾಗುತ್ತ ಸ.ನಂ.123ರ ಆಗ್ನೇಯ ಬಿಂದುವನ್ನು ತಲುಪುತ್ತದೆ. ನಂತರ ಇದೇ ಗ್ರಾಮದ ಸ.ನಂ.123, 122 ಪಶ್ಚಿಮಾಭಿಮುಖವಾಗಿ, ದಕ್ಷಿಣಾಗಡಿಯಲ್ಲಿ ಸಾಗುತ್ತ, ಹೊರಳಗಲ್ಲು ಗ್ರಾಮದ ಸ.ನಂ.144ರ ಅಗ್ನೇಯ ಬಿಂದುವನ್ನು ತಲುಪುತ್ತದೆ. ಇದೇ ಗ್ರಾಮದ ಸ.ನಂ.144, 143, 134, 135ರ ಪಶ್ಚಿಮಾಭಿಮುಖವಾಗಿ, ದಕ್ಷಿಣಾಗಡಿಯಲ್ಲಿ ಸಾಗುತ್ತ, ಸ.ನಂ.135ರ ನೈರುತ್ಯ ಬಿಂದುವನ್ನು ತಲುಪುತ್ತದೆ. ಸ.ನಂ.135, 137, 138ರ ಉತ್ತರಾಭಿಮುಖವಾಗಿ ಪಶ್ಚಿಮ ಗಡಿಯಲ್ಲಿ ಸಾಗುತ್ತಾ, ಶೀಗೇಕೋಟೆ ಗ್ರಾಮದ ಗಡಿಯನ್ನು ಸಂಧಿಸುತ್ತದೆ. ಶೀಗೇಕೋಟೆ ಗ್ರಾಮಗಡಿಗುಂಟಾ ಪಶ್ಚಿಮಾಭಿಮುಖವಾಗಿ ಉತ್ತರಾಭಿಮುಖವಾಗಿ ಸಾಗುತ್ತಾ, ಸ.ನಂ.56ರ ನೈರುತ್ಯ ಬಿಂದುವನ್ನು ತಲುಪುತ್ತದೆ. ನಂತರ ಇದೇ ಗ್ರಾಮದ ಸ.ನಂ. 56, 170, 68, 72, 81, 83, 3, 159, 158, 18 ರ ಉತ್ತಾರಾಭಿಮುಖವಾಗಿ ಪಶ್ಚಿಮ ಗಡಿಯಲ್ಲಿ ಸಾಗುತ್ತಾ, ಸ.ನಂ.18ರ ವಾಯುವ್ಯ ಬಿಂದುವನ್ನು ತಲುಪುತ್ತದೆ. ನಂತರ ಶಿವನಹಳ್ಳಿ ಗ್ರಾಮದ ಗಡಿ ಸಂಧಿಸಿ ಗ್ರಾಮದ ಗಡಿಯೊಂದಿಗೆ ಉತ್ತರಾಭಿಮುಖವಾಗಿ ಪಶ್ಚಿಮಾಭಿಮುಖವಾಗಿ ಸಾಗುತ್ತಾ, ರಾಷ್ಟ್ರೀಯ ಹೆದ್ದಾರಿ-209ರ ಮಧ್ಯಭಾಗವನ್ನು ತಲುಪುತ್ತದೆ. ರಾಷ್ಟ್ರೀಯ ಹೆದ್ದಾರಿ-209ರ ಮಧ್ಯಭಾಗದಲ್ಲಿ ಉತ್ತರಾಭಿಮುಖವಾಗಿ ಸಾಗುತ್ತಾ ಇದೇ ಗ್ರಾಮದ ಸ.ನಂ.310ರ ವಾಯುವ್ಯ ಬಿಂದುವನ್ನು ತಲುಪುತ್ತದೆ. ನಂತರ ಶಿವನಹಳ್ಳಿ ಗ್ರಾಮಠಾಣಾ ಗಡಿಯ ಉತ್ತರಾಭಿಮುಖವಾಗಿ ಪಶ್ಚಿಮಾಭಿಮುಖವಾಗಿ ಸಾಗುತ್ತ ಸ.ನಂ.371ರ ನೈರುತ್ಯ ಬಿಂದುವನ್ನು ತಲುಪುತ್ತದೆ. ಇದೇ ಗ್ರಾಮದ ಸ.ನಂ.371ರ ಉತ್ತರಾಭಿಮುಖವಾಗಿ ಪಶ್ಚಿಮಗಡಿಯಲ್ಲಿ ಸಾಗುತ್ತ ಸ.ನಂ.371ರ ವಾಯುವ್ಯ ಬಿಂದುವನ್ನು ತಲುಪುತ್ತದೆ. ನಂತರ ಇದೇ ಗ್ರಾಮದ ಸ.ನಂ.371, 373, 375, 18, 30ಗಳ ಪೂರ್ವಾಭಿಮುಖವಾಗಿ ಉತ್ತರಗಡಿಯಲ್ಲಿ ಸಾಗುತ್ತ ಸ.ನಂ.30 ರ ಈಶಾನ್ಯ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



ಬಿಂದುವನ್ನು ತಲುಪುತ್ತದೆ. ಇದೇ ಗ್ರಾಮದ ಸ.ನಂ.30 ರ ದಕ್ಷಿಣಾಭಿಮುಖವಾಗಿ ಪೂರ್ವ ಗಡಿಯಲ್ಲಿ ಸಾಗುತ್ತ, ಸ.ನಂ.29ರ ನೈರುತ್ಯ ಬಿಂದುವನ್ನು ತಲುಪುತ್ತದೆ. ಇದೇ ಗ್ರಾಮದ ಸ.ನಂ.29, 28ರ ಉತ್ತರಾಭಿಮುಖವಾಗಿ ಪಶ್ಚಿಮ ಗಡಿಗುಂಟಾ ಸಾಗುತ್ತ, ಸ.ನಂ.28ರ ವಾಯುವ್ಯ ಬಿಂದುವನ್ನು ತಲುಪುತ್ತದೆ. ನಂತರ ಇದೇ ಗ್ರಾಮದ ಸ.ನಂ.28, 29, 20, 22 ರ ಪೂರ್ವಾಭಿಮುಖವಾಗಿ ಉತ್ತರ ಗಡಿಯಲ್ಲಿ ಸಾಗುತ್ತಾ, ರಾಷ್ಟ್ರೀಯ ಹೆದ್ದಾರಿ-209ರ ಮಧ್ಯಭಾಗವನ್ನು ತಲುಪುತ್ತದೆ. ನಂತರ ರಾಷ್ಟ್ರೀಯ ಹೆದ್ದಾರಿ-209ರ ಮಧ್ಯಭಾಗದಲ್ಲಿ ದಕ್ಷಿಣಾಭಿಮುಖವಾಗಿ ಸಾಗುತ್ತಾ, ರಾಷ್ಟ್ರೀಯ ಹೆದ್ದಾರಿ-209ನ್ನು ದಾಟಿ ಶಿವನಹಳ್ಳಿ ಗ್ರಾಮದ ಸ.ನಂ.50 ರ ವಾಯುವ್ಯ ಬಿಂದು 'ಸಿ' ರಲ್ಲಿ ಮುಕ್ತಾಯಗೊಳ್ಳುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ರಾಜೇಶ್ ಎಸ್.ಸೂಳಿಕೇರಿ)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.
(ಬಿಡಿಎ & ಬೆಂ-1).

**ಕರ್ನಾಟಕ ಸರ್ಕಾರ**

ಸಂಖ್ಯೆ: ನಅಇ 471 ಬಿಎಂಆರ್ 2025 (ಇ)

ಕರ್ನಾಟಕ ಸರ್ಕಾರದ ಸಚಿವಾಲಯ,
4ನೇ ಮಹಡಿ, ವಿಕಾಸಸೌಧ,
ಡಾ|| ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 24.11.2025

## ಅಧಿಸೂಚನೆ-II

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ 1961 (1963 ರ ಕರ್ನಾಟಕ ಅಧಿನಿಯಮ ಸಂಖ್ಯೆ:11) ರ ಕಲಂ 4-A(4) ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 471 ಬಿಎಂಆರ್ 2025 (ಇ), ದಿನಾಂಕ: 24.11.2025 ರಲ್ಲಿ ಕನಕಪುರ ಸ್ಥಳೀಯ ಯೋಜನಾ ಪ್ರದೇಶದಿಂದ ಹೊರತುಪಡಿಸಿ, ಗ್ರೇಟರ್ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶಕ್ಕೆ ಸೇರ್ಪಡೆಗೊಳಿಸಿರುವ 8 ಗ್ರಾಮಗಳ ಪ್ರದೇಶಕ್ಕೆ ಗ್ರೇಟರ್ ಬೆಂಗಳೂರು ಪರಿಷ್ಕೃತ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ ಅನುಮೋದನೆಯಾಗುವವರೆಗೆ ಕನಕಪುರ ಸ್ಥಳೀಯ ಯೋಜನಾ ಪ್ರದೇಶದ ಅನುಮೋದಿತ ಮಹಾಯೋಜನೆ ಹಾಗೂ ವಲಯ ನಿಯಮಾವಳಿಗಳನ್ನು ಅಳವಡಿಸಿಕೊಳ್ಳಲು ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 471 ಬಿಎಂಆರ್ 2025 (ಇ), ದಿನಾಂಕ: 24.11.2025 ರ ಪೂರ್ವದಲ್ಲಿ ಕನಕಪುರ ಯೋಜನಾ ಪ್ರಾಧಿಕಾರದಿಂದ ಅನುಮೋದನೆಯಾಗಿರುವ ಹಾಗೂ ಅನುಮೋದನೆಯಾಗಿ ವಿವಿಧ ಹಂತಗಳಲ್ಲಿರುವ ಪ್ರಕರಣಗಳಲ್ಲಿ, ಕನಕಪುರ ಪ್ರಾಧಿಕಾರವು ನೀಡಿರುವ ಅನುಮೋದನೆಗಳನ್ನು ಸಂರಕ್ಷಿಸಿ ಮುಂದುವರೆಸಲು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ರಾಜೇಶ್ ಎಸ್.ಸೂಳಿಕೇರಿ)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.
(ಬಿಡಿಎ & ಬೆಂ-1).

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH